# ಸೈಬರ್ ಕೆಫೆ ಮಾಲೀಕರ ರಕ್ಷಕ ಸಾಫ್ಟ್‌ವೇರ್

**ಬೆಂಗಳೂರು:** ಬಾಂಬ್ ದಾಳಿ, ಬೆದರಿಕೆ ಅಥವಾ ಅಶ್ಲೀಲ ಈ-ಮೇಲ್ ಬಂದಾಗ ಸಾಮಾನ್ಯವಾಗಿ ಸೈಬರ್ ಕೆಫೆಗಳು ಇದರ ಮೂಲವಾಗಿರುತ್ತವೆ. ಇದರಿಂದ ಕಾನೂನು ರಕ್ಷಕರು ಆರೋಪಿಗಳನ್ನು ಬಂಧಿಸಲು ಸೈಬರ್ ಕೆಫೆ ಮೇಲೆಯೇ ದಾಳಿ ಮಾಡುತ್ತಾರೆ. ಗ್ರಾಹಕರ ಸಂಪೂರ್ಣ ವಿಳಾಸ ದಾಖಲು ಮಾಡುವುದು ಮಾಹಿತಿ ತಂತ್ರಜ್ಞಾನ ಕಾಯಿದೆ ಪ್ರಕಾರ ಸೈಬರ್ ಕೆಫೆ ಮಾಲೀಕರಿಗೆ ಕಡ್ಡಾಯ. ಇದು ಅತ್ಯಗತ್ಯವಾಗಿರುವುದರಿಂದ ಮಾಲೀಕರು ಸಂದಿಗ್ಧ ಸ್ಥಿತಿಯಲ್ಲಿ ಮುಳುಗಿದ್ದಾರೆ. ಜೊತೆಗೆ ವ್ಯಾಪಾರ ನಷ್ಟದ ಭೀತಿಯಲ್ಲಿಯೂ ಇದ್ದಾರೆ.

ಆದರೆ, ಈಗ ಬೆಂಗಳೂರಿನಲ್ಲಿ ಖಾಸಗಿ ಕಂಪನಿಯೊಂದು ಅಭಿವೃದ್ಧಿಪಡಿಸಿರುವ ಸಾಫ್ಟ್‌ವೇರ್ ಸೈಬರ್ ಕೆಫೆ ಮಾಲೀಕರ ನೆರವಿಗೆ ಧಾವಿಸಿದೆ. ಇದರಿಂದ ಗ್ರಾಹಕರ ಭಾವಚಿತ್ರ ಗುರುತು ಸೇರಿದಂತೆ ಡಿಜಿಟಲ್ ಮಾಹಿತಿ ಸಂಗ್ರಹಿಸಬಹುದು. ಇದನ್ನು ಕಾನೂನು ರಕ್ಷಕರು ಕೂಡ ಬೆಂಬಲಿಸಿದ್ದಾರೆ.

ಈ ಸಾಫ್ಟ್‌ವೇರ್ ಮಾಲೀಕರಿಗೆ ಉಚಿತವಾಗಿ ದೊರೆಯಲಿದೆ. 'ಕ್ಲಿಕ್ - ಸೈಬರ್ ಕೆಫೆ ಮ್ಯಾನೇಜರ್' ಎಂದು ಸಾಫ್ಟ್‌ವೇರ್‌ಗೆ ಹೆಸರಿಸಲಾಗಿದೆ. ಐಡಿಯಾಕ್ಟ್ಸ್ ಇನ್ನೋವೇಸನ್ ಇದನ್ನು ಅಭಿವೃದ್ಧಿಪಡಿಸಿದೆ. ಅಂತರ್ಜಾಲ ಬಳಕೆದಾರರ ಮಾಹಿತಿ ಸಂಗ್ರಹಿಸುವ ಸಾಮರ್ಥ್ಯ ಈ ಸಾಫ್ಟ್‌ವೇರ್‌ಗೆ ಇರುವುದನ್ನು ಮನಗಂಡಿರುವ ಬೆಂಗಳೂರು ಪೊಲೀಸರು, ಇದೀಗ ಸಾಫ್ಟ್‌ವೇರ್ ಅಳವಡಿಸಿಕೊಳ್ಳಲು ಸಲಹೆ ಮಾಡುತ್ತಿದ್ದಾರೆ.

ಬೆಂಗಳೂರು ಪೂರ್ವ ವಿಭಾಗದ ಪೊಲೀಸರು ಐಡಿಯಾಕ್ಟ್ಸ್ ಇನ್ನೋವೇಸನ್ ಕಂಪನಿ ಸಹಯೋಗದಲ್ಲಿ ಗುರುವಾರ ಸೈಬರ್ ಕೆಫೆ ಮಾಲೀಕರ ಸಭೆ ಆಯೋಜಿಸಿದ್ದರು. ಈ ಸಭೆಯಲ್ಲಿ ಸುಮಾರು 200 ಸೈಬರ್ ಕೆಫೆ ಮಾಲೀಕರು ಪಾಲ್ಗೊಂಡಿದ್ದರು.



ಸಭೆಯ ಅಧ್ಯಕ್ಷತೆ ವಹಿಸಿದ್ದ ಜಂಟಿ ಆಯುಕ್ತ ಅಲೋಕ್‌ಕುಮಾರ್ ಮಾತನಾಡಿ, ಕಾನೂನು ಜಾರಿಯಲ್ಲಿ ಅಂತರ್ಜಾಲ ಭದ್ರತೆ ಪ್ರಾಮುಖ್ಯತೆ ಪಡೆದುಕೊಂಡಿದೆ. ಈಗಲೂ ಶೇ.47ರಷ್ಟು ಮಂದಿ ಸೈಬರ್ ಕೆಫೆಯಲ್ಲಿಯೇ ಅಂತರ್ಜಾಲ ಬಳಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸಮಗ್ರ ಮಾಹಿತಿ ನಿರ್ವಹಣೆ ಕಡ್ಡಾಯವಾಗಿದೆ ಎಂದು ಹೇಳಿದರು.

ಮಾಹಿತಿ ತಂತ್ರಜ್ಞಾನ ಕಾಯಿದೆ - 2000 ಹಾಗೂ ರಾಜ್ಯ ಮಾಹಿತಿ ತಂತ್ರಜ್ಞಾನ ಕಾಯಿದೆ ಪ್ರಕಾರ, ಗ್ರಾಹಕರ ಹೆಸರು, ವಿಳಾಸ, ಸಂಪರ್ಕ ವಿವರ ಹಾಗೂ ಭಾವಚಿತ್ರ ಗುರುತು ತೆಗೆದುಕೊಳ್ಳುವುದು ಸೈಬರ್ ಕೆಫೆ ಮಾಲೀಕರಿಗೆ ಕಡ್ಡಾಯವಾಗಿದೆ. ಈ ಮಾಹಿತಿಯನ್ನು ಸಂಗ್ರಹಿಸಿಡದ ಮಾಲೀಕರಿಗೆ 25,000 ರೂ.ವರೆಗೂ ದಂಡ ವಿಧಿಸಬಹುದು.

ಮಾಹಿತಿ ಸಂಗ್ರಹಿಸಲು ಪ್ರಸ್ತುತ ಸೈಬರ್ ಕೆಫೆ ಮಾಲೀಕರ ಬಳಿ ಪರಿಹಾರವೇ ಇಲ್ಲ. 'ಕ್ಲಿಕ್ - ಸೈಬರ್ ಕೆಫೆ ಮ್ಯಾನೇಜರ್' ಸಾಫ್ಟ್‌ವೇರ್ ನೆರವಿನಿಂದ ದೀರ್ಘಕಾಲದವರೆಗೆ ಮಾಹಿತಿ ಸಂಗ್ರಹಿಸಿಡಬಹುದು. ಜೊತೆಗೆ ಕೆಫೆಯ ಅಕೌಂಟ್ ಕೂಡ ನಿರ್ವಹಣೆ ಮಾಡಬಹುದು. ಇದೇ ವೇಳೆ, ಅಗತ್ಯ ಬಿದ್ದಾಗ ಮಾಹಿತಿಯನ್ನೂ ನೀಡಬಹುದೆಂದು ಕಂಪನಿ ಮುಖ್ಯಸ್ಥ ಕೃಷ್ಣಸ್ವಾಮಿ ತಿಳಿಸಿದ್ದಾರೆ.

ಈ ಉಚಿತ ಸಾಫ್ಟ್‌ವೇರ್ ಗ್ರಾಹಕರ ಗುರುತು ಪತ್ರ ತಯಾರಿಸುವಲ್ಲಿ ನೆರವಾಗುತ್ತದೆ. ಭಾವಚಿತ್ರ, ವಿಳಾಸ ಮತ್ತು ಸಂಪರ್ಕ ವಿಳಾಸ ಒಳಗೊಂಡಿರುತ್ತದೆ.